ಕರ್ನಾಟಕದ ಕೃಷ್ಣಾ ನದಿಯ ಬಗ್ಗೆ ಇರಬಹುದು, ಕುಡಿಯುವ ನೀರಿನ ಬಗ್ಗೆ ಇರಬಹುದು, ಅದರ ಬಗ್ಗೆ ಚರ್ಚೆಯಾಗಬೇಕು. ನಾವೇನೂ CAG ವರದಿಯನ್ನು ಮಂಡಿಸಿ ಎಂದು ಹೇಳಿಲ್ಲ. CAG ವರದಿಯ ಪ್ರಕಾರ ಯಾರು ತಪ್ಪು ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ವೆಂಕಟರಾವ್ ನಾಡಗೌಡ : ನೀರಾವರಿ ಬಗ್ಗೆ ಚರ್ಚಿಸಲು ನೀವು ಅವಕಾಶ ಕೊಡಿ, ನಾವು ಚರ್ಚೆ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : Wrong message ಹೋಗಬಾರದು. ನೀವು ತಪ್ಪು ಮಾಡಿರುವುದನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ. . . . ನಿನ್ನೆ CAG ವರದಿಯನ್ನು ಏಕೆ ಮಂಡಿಸಿದಿರಿ? ಇಷ್ಟೆಲ್ಲಾ ಆದರೂ ಸಭೆಯನ್ನು ಮುಂದೂಡುವುದು ಒಳ್ಳೆಯದು. ಇಲ್ಲವೆಂದರೆ ನಾವು ಸದನವನ್ನು boycott ಮಾಡಬೇಕಾಗುತ್ತದೆ. ಇದು ದುರುದ್ದೇಶಪೂರ್ವಕವಾಗಿ. . .

ಶ್ರೀ ಬಂಡೆಪ್ಪ ಖಾಶೆಂಪೂರ್ : ಅವರನ್ನು BAC ಗೆ ಕರೆಸಿ, ಸಭೆಯನ್ನು ಅರ್ಧ ಗಂಟೆ ಸಭೆಯನ್ನು ಮುಂದಕ್ಕೆ ಹಾಕಿ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನವನ್ನು boycott ಮಾಡಿದರು)

4. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು :

ಕಾರ್ಯದರ್ಶಿ : ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2012ನೇ ಸಾಲಿನ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ವಿಧೇಯಕವನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ–1)